# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ

**ಸಿ.ಸಿ. ನಂ. 195/2016**

| | | |
|---|---|---|
| ಸಾಕ್ಷಿದಾರರ ಹೆಸರು | ವಿನಯ್ ಇ ವಿ | **P.W-6** |
| ತಂದೆಯ / ಗಂಡನ ಹೆಸರು | ವಾಸಪ್ಪ | **CW -24** |
| ವಯಸ್ಸು | 49 ವರ್ಷ | |
| ಉದ್ಯೋಗ | ಪಿ ಐ , ಎಸ್ ಪಿ ಕಛೇರಿ, ಹಾಸನ | |
| ವಾಸ ಸ್ಥಳ | ಹಾಸನ | ದಿನಾಂಕ 22-07-2026 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಕಲಂ 299 ದಂಡ ಪ್ರಕ್ರಿಯಾ ಸಂಹಿತೆಯಡಿ ಸಾಕ್ಷಿಯ ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 2015 ರಿಂದ 2017 ರವರೆಗೆ ಹಾಸನ ಡಿ ಸಿ ಐ ಬಿ ಕಛೇರಿಯಲ್ಲಿ ಪೊಲೀಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06-02-2016 ರಂದು ಈ ಪ್ರಕರಣದ ಕಡತವನ್ನು ಚಾಸಾ 17 ರವರಿಂದ ಪಡೆದುಕೊಂಡಿರುತ್ತೇನೆ. ಚಾಸಾ 17 ರವರು 3ನೇ ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿದ್ದು, ಚಾಸಾ 17 ರವರ ಸಮಕ್ಷಮ 3ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ. ನಂತರ ಇನ್ನಿತರ ಆರೋಪಿತರಾದ ಗೋಪಾಲಕೃಷ್ಣ, ಬಾಬು, ಚಾಂದ್ ಪಾಷ, ಚೋಮನ್, ಆರೋಪಿ 2, 4 ರಿಂದ 6 ರವರನ್ನು ಪತ್ತೆ ಮಾಡಲು ಚಾಸಾ 19 ರಿಂದ 21 ರವರನ್ನು ನೇಮಕ ಮಾಡಿದ್ದು, ಸದರಿ ಸಿಬ್ಬಂದಿಗಳು 2, 4 ರಿಂದ 6ನೇ ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ಸದರಿ ಆರೋಪಿತರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಸದರಿ ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಕೃತ್ಯ ಎಸಗಲು ತಾವು ಬಳಸಿದ್ದ ವಾಹನ, ಪೆನ್ ಡ್ರೈವ್, ಸಿ ಪಿ ಯು ಮತ್ತು ದಾಖಲಾತಿಗಳನ್ನು ತಮ್ಮನ್ನು ಕರೆದುಕೊಂಡು ಹೋದರೆ

ತೋರಿಸುವುದಾಗಿ ತಿಳಿಸಿರುತ್ತಾರೆ. ನಂತರ ಠಾಣೆಗೆ ಪಂಚರಾದ ಚಾಸಾ 3 ಮತ್ತು 4 ರವರನ್ನು ಬರಮಾಡಿಕೊಂಡು ಅವರಿಗೆ ಈ ಪ್ರಕರಣದ ವಿದ್ಯಮಾನ ತಿಳಿಸಿ ಆರೋಪಿತರನ್ನು ತೋರಿಸಿ, ಆರೋಪಿತರು , ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ಠಾಣಾ ಮುಂಭಾಗದಲ್ಲಿದ್ದ ಕಾರನ್ನು ಆರೋಪಿತರು ತೋರಿಸಿದ್ದು, ಠಾಣಾ ಮುಂಭಾಗ ಆರೋಪಿತರ ಸಮಕ್ಷಮ ಕಾರಿನಲ್ಲಿದ್ದ ಪೆನ್‌ಡ್ರೈವ್, ಲಾಪ್ ಟಾಪ್, ಮೌಸ್, ಸಿ ಪಿ ಯು ಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಬೆಳಗ್ಗೆ 11.30 ರಿಂದ 12.30 ರವರೆಗೆ ಮಹಜರ್ ಕ್ರಮ ಜರುಗಿಸಿ ಪಂಚರ ಸಹಿ ಪಡೆದಿರುತ್ತೇನೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಮಹಜರ್ ಕಾಲದಲ್ಲಿ ಕರಡು ನಕಾಶೆಯನ್ನು ತಯಾರಿಸಿರುತ್ತೇನೆ. ನಿಪಿ 7 ಮಹಜರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ವಶಕ್ಕೆ ಪಡದ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿ ನಂ. 31/2016 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿತರು ಆಚಂಗಿಯಲ್ಲಿ ತಾವು ವಾಸಿಸುತ್ತಿದ್ದ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದು ಸದರಿ ಮನೆಯಲ್ಲಿ ನಕಲಿ ನೋಟು ಮತ್ತು ಇತರೆ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ಮ. 1.15 ರಿಂದ 4.30 ರವರೆಗೆ ಮಹಜರ್ ಮೂಲಕ ವಶಕ್ಕೆ ಪಡೆದುಕೊಂಡಿರುತ್ತೇನೆ. ಮಹಜರ್ ಕಾಲದಲ್ಲಿ ಕರಡು ನಕಾಶೆಯನ್ನು ತಯಾರಿಸಿರುತ್ತೇನೆ. ನಿಪಿ 8 ಮಹಜರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಆರೋಪಿತರಿಗೆ ವಶಕ್ಕೆ ಪಡೆದ ಸ್ವತ್ತುಗಳನ್ನು ಠಾಣಾ ಸ್ವತ್ತಿನ ಪಟ್ಟಿ ನಂ. 32/2016 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ 3 , 4, 5 ಮತ್ತು 17 ರಿಂದ 20 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಆರೋಪಿತರನ್ನು ಸೂಕ್ತ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 07-02-2016 ರಂದು ತನಿಖೆ ಮುಂದುವರೆಸಿ ಕೃತ ನಡೆದ ಸ್ಥಳದಲ್ಲಿ ತೆಗೆಸಿದ ಛಾಯಾಚಿತ್ರವನ್ನು ಮತ್ತು ಸಿ ಡಿ ಯನ್ನು ಚಾಸಾ 21 ರವರು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಬೆಳಗ್ಗೆ 10.50 ರಿಂದ 11.00 ರವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ 9 ಮಹಜರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ವಶಕ್ಕೆ ಪಡೆದುಕೊಂಡು ಛಾಯಾಚಿತ್ರ ಮತ್ತು ಸಿ ಡಿಯನ್ನು ಸ್ವತ್ತಿನ ಪಟ್ಟಿ ನಂ. 33/2016 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಸಕಲೇಶಪುರದ ಸಿಂಡಿಕೇಟ್ ಬ್ಯಾಂಕ್ ಗೆ ತೆರಳಿ 3ನೇ ಆರೋಪಿಯು ಚಾಸಾ 1 ರವರಿಗೆ ನೀಡಿದ ಚೆಕ್ಕನ್ನು ಮ್ಯಾನೇಜರ್ ರವರು ಹಾಜರುಪಡಿಸಿದ್ದು ಅದನ್ನು ಮಹಜರ್ ಮೂಲಕ ಮ. 3.15 ರಿಂದ 3.45 ರವರೆಗೆ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರಿನ ದೃಡೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 11 ಎಂದು ಗುರುತಿಸಲಾಯಿತು. ಚೆಕ್ ನ ಯಥಾ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 12 ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ವಶಕ್ಕೆ ಪಡೆದ ಸ್ವತ್ತುಗಳನ್ನು ಠಾಣಾ ಪಟ್ಟಿ ನಂ. 34/2016 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 3, 4 ಮತ್ತು 17 ರವರ ಮರುಹೇಳಿಕೆ ಪಡೆದಿರುತ್ತೇನೆ. ಚಾಸಾ 6, 8, 9, 10 ರವರ ಹೇಳಿಕೆ ಪಡೆದಿರುತ್ತೇನೆ. ಸಿಬ್ಬಂದಿಗಳಾದ ಚಾಸಾ 21 ರಿಂದ 23 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 03-03-2016 ರಂದು ತನಿಖಾ ಕಾಲದಲ್ಲಿ ವಶಕ್ಕೆ ಪಡೆದ ನಕಲಿ ನೋಟುಗಳನ್ನು ಅಭಿಪ್ರಾಯಕ್ಕಾಗಿ ಆರ್ ಬಿ ಐ ಮೈಸೂರಿಗೆ ಕಳುಹಿಸಿಕೊಟ್ಟಿರುತ್ತೇನೆ.

ದಿಃ 27-04-2016 ರಂದು ಆರೋಪಿತರು ವಾಸವಿದ್ದ ಮನೆಯ ಖಾತಾ ಎಕ್ಸಟ್ರಾಕ್ಟ ಮತ್ತು ಬಾಡಿಗೆ ಕರಾರು ಪತ್ರವನ್ನು ಪಡೆದುಕೊಂಡಿರುತ್ತೇನೆ. ಖಾತಾ ಎಕ್ಸಟ್ರಾಕ್ಟನ ಯಥಾ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 13 ಎಂದು, ಬಾಡಿಗೆ ಕರಾರಿನ ಯಥಾ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 14 ಎಂದು ಗುರುತಿಸಲಾಯಿತು.

ಅದೇ ದಿನ ಆರ್ ಬಿ ಐ ಮೈಸೂರಿನಿಂದ ಅಭಿಪ್ರಾಯ ವರದಿ ಬಂದಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯ ಯಥಾ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು.

ಸದರಿ ಪ್ರಕರಣದಲ್ಲಿ 1ನೇ ಆರೋಪಿ ತಲೆ ಮರೆಸಿಕೊಂಡಿದ್ದು ಹಲವಾರು ಇಲಾಖೆಯಿಂದ ಅಭಿಪ್ರಾಯ ವರದಿ ಬರಲು ಬಾಕಿ ಇದ್ದು ನಾನು ಭಾಗಶಃ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ